# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-20

ಸಾಕ್ಷಿದಾರರ ಹೆಸರುಃ ಡಾಃ ಛಾಯಾಕುಮಾರಿ

ತಂದೆಃಗಂಡನ ಹೆಸರುಃ ಎಂ. ಕೃಷ್ಣಾ

ವಯಸ್ಸುಃ 50 ವರ್ಷ

ಉದ್ಯೋಗಃ ಉಪನಿರ್ದೇಶಕರು ಆರ್. ಎಫ್ ಎಸ್ ಎಲ್

ವಾಸ ಸ್ಥಳಃ ದಾವಣಗೆರೆ

**ದಿನಾಂಕ:05.03.2025 ರಂದು ಸಾಕ್ಷಿ ಹಾಜರಿದ್ದು , ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. 2016 ರಿಂದ ಆರ್ ಎಫ್ ಎಸ್ ಎಲ್ ದಾವಣಗೆರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ05.04.2021 ರಂದು ಈ ಕೇಸಿನಲ್ಲಿ ಒಟ್ಟು 09 ಸೀಲು ಮಾಡಿದ ವಸ್ತುಗಳನ್ನು ರಾಸಾಯಾನಿಕ ಪರೀಕ್ಷೆಗೆ ಕಳಿಸಿಕೊಟ್ಟಿದ್ದರು. ಅವುಗಳನ್ನು ಪರೀಕ್ಷೆ ಮಾಡಿ ನಾನು ವರದಿ ನೀಡಿರುತ್ತೇನೆ. ನಾನು ಪರೀಕ್ಷೆ ಮಾಡಿ ನೋಡಿದಾಗ ಐಟಂ.1 ರಿಂದ 7 ವಸ್ತುಗಳು ಮಾನವನ ರಕ್ತ ಕಲೆಯಾಗಿರುವುದು ಕಂಡು ಬರುತ್ತದೆ ಮತ್ತು ಐಟಂ ನಂ.1, 2 ಮತ್ತು 7 -O ಗ್ರೂಪ್ ಗೆ ಸೇರಿದ ರಕ್ತದ ಮಾದರಿಯಾಗಿರುತ್ತದೆ. ಐಟಂ ನಂ.3 ರಿಂದ 6 ಬಿ ರಕ್ತದ ಮಾದರಿಯಾಗಿರುತ್ತದೆ. ಈ ಬಗ್ಗೆ ವರದಿ ನೀಡಿರುತ್ತೇನೆ. ಅದನ್ನು ನಿಪಿ-65, ಸಾಕ್ಷಿ ಸಹಿಗಳನ್ನು ನಿಪಿ-65(ಎ) ರಿಂದ (ಸಿ) ಅಂತಾ ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಐಟಂ ನಂ.1 ರಿಂದ 9 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

2. ಮೇಲ್ಕಂಡ ವಸ್ತುಗಳನ್ನು ದಿನಾಂಕ೦05.04.2021 ರಂದು ಸ್ವೀಕರಿಸಿರುತ್ತೇನೆ.

ಯಾವ ದಿನ ಪರೀಕ್ಷೆ ಮಾಡಿದ್ದೇನೆ ಎಂದು ವರದಿಯಲ್ಲಿ ಬರೆದಿಲ್ಲ. ನನ್ನ ವರದಿಯಲ್ಲಿ ಬರೆದಿರುವುದು ನನ್ನ ಪರೀಕ್ಷೆಗೆ ಅನುಗುಣವಾಗಿದೆ. ಪೊಲೀಸರು ಸ್ಯಾಂಪಲ್ ಸೀಲ್ ನ ಮಾದರಿ ಕಳಿಸಿದ್ದರು. ಐಟಂ ನಂ.1 ರಿಂದ 9 ಯಾವ ವ್ಯಕ್ತಿಗೆ ಸಂಬಂಧಿಸಿದ್ದು ಅಂತಾ ಕೇಳಿಲ್ಲ. ಯಾವ ಆಧಾರದ ಮೇಲೆ ಪರೀಕ್ಷೆ ಮಾಡಿದ್ದೇನೆ ಎಂದು ವರದಿಯಲ್ಲಿ ಬರೆದಿದ್ದೇನೆ. ವರದಿಯಲ್ಲಿ 02 ದಿನಾಂಕಗಳು ನಮೂದಾಗಿದೆ ಎಂದರೆ ಸಾಕ್ಷಿ ಆನ್ ಲೈನ್ ನಲ್ಲಿ approve ಆಗಿರುವುದು ಒಂದು, ಪ್ರಿಂಟ್ ತೆಗೆದು ಸಹಿ ಮಾಡಿದ ದಿನಾಂಕ ಒಂದು ಅಂತಾ ಹೇಳುತ್ತಾರೆ. ನಾನು ಯಾವುದೇ ಪರೀಕ್ಷೆ ಮಾಡದೇ ಪೊಲೀಸರ ಮಾತು ಕೇಳಿ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.